ಶ್ರೀವ್ಯಾಸಮಧ್ವಸಂಶೋಧನಪ್ರಷ್ಠಾನ (ರಿ.)

ನಿರ್ದೇಶಕರು:

ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ
(ರಾಷ್ಟ್ರಪ್ರತಿ ಪ್ರಶಸ್ತಿ ಹಾಗೂ ರಾಜ್ಯೋತ್ಸವಪ್ರಶಸ್ತಿ ಪುರಸ್ಕೃತರು)
ನಿವೃತ್ತ ಪ್ರಾಂಶುಪಾಲರು:
ಸರ್ಕಾರಿ ಪ್ರಥಮ ದರ್ಜೆ ಕಾಲೇಜ್, ಬೆಂಗಳೂರು

"ಪಾಜಕ", ನಂ. 91/26,3ನೇ ಅಡ್ಡರಸ್ತೆ,
ಮೌಂಟ್ ಜಾಯ್ ರಸ್ತೆ, ಹನುಮಂತನಗರ
ಬೆಂಗಳೂರು – 560004
ದೂರವಾಣಿ: 080–26602802

ಆಶೀರ್ವಚನ

ಹರಿದಾಸಸಾಹಿತ್ಯವು ಶಾಸ್ತ್ರ, ಸಾಹಿತ್ಯ ಹಾಗು ಸಂಗೀತಗಳ ತ್ರಿವೇಣಿಸಂಗಮ. ಜ್ಞಾನಭಕ್ತಿವೈರಾಗ್ಯರೂಪ ಸಾಧನತ್ರಯಕ್ಕೆ ಅತ್ಯಂತ ಉಪಯುಕ್ತವೆನ್ನಿಸುವ ಹಿರಿಮೆ ಇದರದು. ಅದರಲ್ಲೂ "ದಾಸರೆಂದರೆ ಪುರಂದರದಾಸರಯ್ಯ" ಅಪೂರ್ವ ಹಿರಿಮೆಯ ಶ್ರೀಪುರಂದರದಾಸರ ಕೃತಿಗಳ ಅಧ್ಯಯನ ಆಧ್ಯಾತ್ಮಿಕಪ್ರಪಂಚದ ಪ್ರವೇಶಕ್ಕೆ ದಾರಿದೀಪದಂತಹ ಮಹತ್ತ್ವವನ್ನು ಪಡೆದಿದೆ. ಅವರ ಸಮಗ್ರಕೃತಿಗಳನ್ನು ಒಂದೆಡೆ ನೀಡುವ ಕಾರ್ಯ ತುಂಬಾ ಶ್ಲಾಘ್ಯವಾದ ಸಂಗತಿ. ಅದಕ್ಕಾಗಿ ಅಪಾರ ಪರಿಶ್ರಮ ವಹಿಸಿರುವ ಶ್ರೀ.ಅನಂತರಾವ್ ದಂಡಿನ್ ಇವರ ಪ್ರಯತ್ನ ತುಂಬಾ ಶ್ಲಾಘ್ಯವಾದದು. ಈ ಕಾರ್ಯಕ್ಕಾಗಿಯೇ ಒಂದು ವೆಬ್–ಸೈಟನ್ನು ನಿರ್ಮಿಸಿ ಅದರಲ್ಲಿ ಪುರಂದರದಾಸರ ಕೃತಿಗಳ ಅಧ್ಯಯನಕ್ಕೆ ಅಗತ್ಯವೆನ್ನಿಸುವ ಬಹುಬಗೆಯ ವಿಷಯಗಳನ್ನು ಅಳವಡಿಸುವ ವಿಶಿಷ್ಟಕಾರ್ಯವನ್ನು ಇವರು ಮಾಡಿರುವುದು ಅತ್ಯಂತ ಪ್ರಶಂಸನೀಯವಾದ ಸಂಗತಿ. ವೃತ್ತಿಯಲ್ಲಿ ಇಂಜಿನೀಯರ್ ಆಗಿದ್ದ ಇವರು ಪ್ರವೃತ್ತಿಯಲ್ಲಿ ದಾಸಸಾಹಿತ್ಯದ ಅಧ್ಯಯನಕ್ಕೆ ತೊಡಗಿರುವುದು ವಿಲಕ್ಷಣವಾದರೂ ಆದರ್ಶಪ್ರಾಯವಾದ ಕಾರ್ಯ. ದಾಸಸಾಹಿತ್ಯದ ಬಗ್ಗೆ ಅದರಲ್ಲೂ ಶ್ರೀಪುರಂದರದಾಸರ ಬಗ್ಗೆ ಇಂತಹ ವ್ಯಾಪಕಪ್ರಯತ್ನ ಅಷ್ಟಾಗಿ ನಡೆದಿಲ್ಲ. ಪ್ರಸ್ತುತ ಶ್ರೀಅನಂತರಾವ್ ಅವರ ಪ್ರಯತ್ನ ಈ ದಿಶೆಯಲ್ಲಿ ನಡೆಯುವ ಮೂಲಕ ಅಂತಹ ದೊಡ್ಡ ಕೊರತೆಯನ್ನು ನೀಗಿಸುವ ವಿಶಿಷ್ಟ ಉದ್ದೇಶದಿಂದ ಕೂಡಿದೆ. ಸಂಖ್ಯೆಯಲ್ಲಿ ೪ಲಕ್ಷವನ್ನೂ ಮೀರಿರುವ ಶ್ರೀಪುರಂದರದಾಸರ ಕೃತಿಗಳಲ್ಲಿ ವಿಜಿತವಾಗಿ ಅವರ ರಚನೆ ಎಂದು ಲಭಿಸಿರುವುದು ೧೦೦೦ವನ್ನೂ ಸಹ ದಾಟುವುದಿಲ್ಲ ಎಂಬುದು ಅತ್ಯಂತ ವಿಷಾದದ ಸಂಗತಿ. ಅದಕ್ಕೆ ಕಾರಣಗಳು ಅನೇಕ. ಆದರೆ ಆ ಬಗ್ಗೆ ಪರಿಕಲ್ಪನೆ ಹಾಗು ಪ್ರವೃತ್ತಿಯ ಕೊರತೆ ಮುಖ್ಯಕಾರಣ ಎನ್ನದೆ ವಿಧಿಯಿಲ್ಲ. ಪ್ರಾಚೀನಕೃತಿಗಳ ಸಂಗ್ರಹಕ್ಕೆ ಇಂದಿನ ತಂತ್ರಜ್ಞಾನ ನೀಡಿರುವ ಸೌಲಭ್ಯ ಅಪಾರವಾದುದು. ಅದನ್ನು ಸೂಕ್ತರೀತಿಯಲ್ಲಿ ಬಳಸಿಕೊಂಡಲ್ಲಿ ಈ ಬಗೆಯ ಕೃತಿಸಂಗ್ರಹ ವ್ಯವಸ್ಥಿತವಾದ ಅವುಗಳ ರಕ್ಷಣೆ, ಬಹುಮುಖಿವಾದ ಅಧ್ಯಯನ ಮೊದಲಾದ ಕಾರ್ಯಗಳು ತುಂಬಾ ತೃಪ್ತಿಕರವಾಗಿ ನಡೆಯಲು ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ಶ್ರೀ.ಅನಂತರಾವ್ ದಂಡಿನ್ ಅವರ ಪ್ರಯತ್ನ ಅತ್ಯಂತ ಪ್ರಶಂಸಾರ್ಹವಾದುದು. ಆಸಕ್ತರು ಇಂತಹ ಉಪಯುಕ್ತಕಾರ್ಯದಲ್ಲಿ ತಮ್ಮಿಂದಾದ ಸೂಕ್ತ ನೆರವನ್ನು ನೀಡುವ ಮೂಲಕ ಇದು ಸಮರ್ಪಕ–ರೀತಿಯಲ್ಲಿ ಪೂರ್ಣಗೊಳ್ಳುವಂತೆ ಮಾಡುವ ಕರ್ತವ್ಯವನ್ನು ನಿರ್ವಹಿಸುವುದು ಅಗತ್ಯ. ಆ ಮೂಲಕ ನಾಡುನುಡಿಗಳಿಗೆ ಮುಖ್ಯವಾಗಿ ಆಧ್ಯಾತ್ಮಿಕಪ್ರಪಂಚಕ್ಕೆ ಅದರಲ್ಲೂ ದಾಸಸಾಹಿತ್ಯದ ಅಧ್ಯಯನದಲ್ಲಿ ಆಸಕ್ತಿ ಹೊಂದಿರುವ ಅಪಾರಸಂಖ್ಯೆಯ ಆಸ್ತಿಕಜಿಜ್ಞಾಸುವೃಂದಕ್ಕೆ ವಿಶೇಷ ಉಪಕಾರ ಮಾಡಿದಂತಾಗುವುದು. ಈ ನಿಟ್ಟಿನಲ್ಲಿ ಅವರ ಕಾರ್ಯ ವಿಶೇಷರೀತಿಯಲ್ಲಿ ಮುಂದುವರೆದು ದಾಸಸಾಹಿತ್ಯದ ವಿಶೇಷವಾಗಿ ಶ್ರೀಪುರಂದರದಾಸರ ಕೃತಿಪ್ರಪಂಚದ ಸದುಪಯೋಗವನ್ನು ಆಸಕ್ತಜನತೆ ಪಡೆಯುವಂತಾಗಲಿ ಎಂದು ಹಾರೈಸುತ್ತೇನೆ.

ವ್ಯಾಸನಕೆರೆ ಪ್ರಭಂಜನಾಚಾರ್ಯ

ಬೆಂಗಳೂರು
೦೧–೧೧–೨೦೨೫